# ಕೆರೆ ಸಮ್ಮೇಳನದ ನಿರ್ಣಯಗಳು

ಕನ್ನಡಪ್ರಭ ವಾರ್ತೆ ಶಿರಸಿ ನ. 15

ತಾಲೂಕಿನ ಸೋಂದಾ ಸ್ವರ್ಣವಲ್ಲಿಯಲ್ಲಿ ನಡೆಯುತ್ತಿರುವ ಕೆರೆ ಸಮ್ಮೇಳನದಲ್ಲಿ 15 ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪಶ್ಚಿಮಘಟ್ಟದ ಕೆರೆಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು ಎಂದು ಕೆರೆ ಸಮ್ಮೇಳನ ಸರ್ಕಾರವನ್ನು ಒತ್ತಾಯ ಮಾಡಿದೆ.

ವಿದ್ಯಾರ್ಥಿಗಳಿಗೆ ಕೆರೆಗಳ ಸಮೀಕ್ಷೆ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಬೇಕು. ಪಶ್ಚಿಮ ಘಟ್ಟಗಳ ಕೆರೆಗಳ ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆ ಹಾಗೂ ವನೀಕರಣಕ್ಕೆ ವಿಶೇಷ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು.

ಭಾರತ ಸರ್ಕಾರದ ಸ್ವಚ್ಛತಾ ಅಭಿಯಾನ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಆಗಬೇಕು. ಸ್ಥಾಪಿತ ಹಿತಾಸ್ತಿಗಳಿಂದ ಆಗಿರುವ ಕೆರೆ ಅತಿಕ್ರಮಣ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಆಗಬೇಕು. ಮಲೆನಾಡಿನ ಕೆರೆಗಳಲ್ಲಿ ಬಹಳಷ್ಟು ಹೂಳು ತುಂಬಿದೆ. ಕೆರೆ ಹೂಳು ತೆಗೆಯಲುಸ್ಥಾನೀಯಪ್ರಯತ್ನಗಳುಹೆಚ್ಚಾಗಬೇಕು. ದೇವಸ್ಥಾನ ಪುಷ್ಕರಣಿ, ಪುಣ್ಯತೀರ್ಥಗಳ ಉತ್ತಮ ನಿರ್ವಹಣೆ ಹಾಗೂ ರಕ್ಷಣೆಗೆ ಮುಂದಾಗಬೇಕು.

ಕಪ್ಪತಗುಡ್ಡ , ಹೊಗ್ರೆ, ಕಾನಗಿರಿ, ಕೊಡಚಾದ್ರಿ ಅಕ್ಷಯ ಜಲಪಾತ್ರೆಗಳನ್ನು ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ಸರ್ಕಾರ ಅವಕಾಶ ನೀಡಬಾರದು. ರಾಜ್ಯದಲ್ಲಿರುವ ಗ್ರಾಮ ಮಟ್ಟದ ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಸಕ್ರಿಯಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು. ದೇವರಕಾಡು, ರಾಮಪತ್ರೆ ಜಡ್ಡಿಗಳಂಥಹ ಜೌಗು ಭೂಮಿಗಳನ್ನು ಸೂಕ್ಷ್ಮ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು. ಕೆರೆ ವ್ಯಾಪ್ತಿ ಮಿತಿಯನ್ನು ಸಡಿಲಗೊಳಿಸಿ ಮಲೆನಾಡಿನ ಅತಿಚಿಕ್ಕ ಕೆರೆಗಳನ್ನು ಸಂರಕ್ಷಣೆ ಮಾಡಲು ಕ್ರಮ ಜರುಗಿಸಬೇಕು.

ಸರ್ಕಾರದ ಇಲಾಖೆಗಳಲ್ಲಿ ಕೆರೆ ಅಭಿವೃದ್ಧಿ ಬಗ್ಗೆ ಸಮನ್ವಯ ತರಬೇಕು. ಇದಕ್ಕೆ ಏಕ ಗವಾಕ್ಷಿ ಯೋಜನೆ ಅತ್ಯವಶ್ಯ. ಪಟ್ಟಣಗಳ ತ್ಯಾಜ್ಯಗಳನ್ನು ಕೆರೆಗಳಿಗೆ ತುಂಬಿ ಕೆರೆ ನಾಶ ಮಾಡುವ ಕುಪ್ರವೃತ್ತಿ, ಕಾಯಿದೆ ಬಾಹಿರ ಚಟುವಟಿಕೆಗಳು ಎಲ್ಲೆಡೆ ವ್ಯಾಪಕವಾಗಿವೆ. ಇವುಗಳ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಈಗಾಗಲೇ ಜಾರಿ ಆಗಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಬೃಹತ್ ಜಲವಿದ್ಯುತ್ ಯೋಜನೆಗಳು ಪಶ್ಚಿಮಘಟ್ಟದ ನದಿಗಳ ನೀರಿನ ಲಭ್ಯತೆ ಅವಲಂಬಿಸಿವೆ. ಈ ನೀರಾವರಿ ಯೋಜನೆಗಳ ದಕ್ಷತೆ ನಿರ್ವಹಣೆ ವ್ಯವಸ್ಥಿತಗೊಳಿಸಬೇಕು. ಪಶ್ಚಿಮ ಘಟ್ಟದ ನದಿಗಳನ್ನು ತಿರುಗಿಸುವಹಾಗೂಜಲವಿದ್ಯುತ್ ಯೋಜನೆಗಳನ್ನು ನಿರ್ಮಾಣ ಮಾಡುವ ಹೊಸ ಯೋಜನೆಗಳ ಜಾರಿ ಬಗ್ಗೆ ಪುನರ್ ವಿಮರ್ಶೆ ಆಗಬೇಕು.

ಕ್ರಿಮಿನಾಶಕ ಬಳಕೆಯಿಂದ ತೀವ್ರವಾಗಿ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಎಂಡೋಸಲ್ಫಾನ್‌ನಿಂದ ಆಗಿರುವ ಭಾರಿ ಅನಾಹುತಗಳು ಈಗಾಗಲೇ ಇವೆ. ಆದ್ದರಿಂದ ಸರ್ಕಾರ ಮಲೆನಾಡಿನಲ್ಲಿ ಅತಿಯಾದ ಕ್ರಿಮಿನಾಶಕ ಬಳಕೆಗೆ ಕಡಿವಾಣ ಹಾಕಬೇಕು ಎಂಬ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.